ಪ್ರಜ್ಞೆಯೊಂದಿಗೆ ಹುಟ್ಟಿಕೊಂಡಿರಬೇಕು. ಮನುಷ್ಯನ ಸೌಹಾರ್ದಯುತ ಸಾಮಾಜಿಕ ಬದುಕಿಗೆ ಅವು ಅತೀ ಅವಶ್ಯವಾಗಿ ಕಂಡಿರಬೇಕು. ಅವುಗಳ ಕಾಲ್ಪನಿಕ ಭಯ ಕೂಡಾ ಜನಸಾಮಾನ್ಯರ ನೆಮ್ಮದಿಯ ಬದುಕಿಗೆ ಅಗತ್ಯವೆನಿಸಿರಬೇಕು. ಅಂತೆಯೆ ನಮ್ಮ ಜನ ಪುಣ್ಯದ ಬಲದಿಂದ ಭೂಮಿಯ ಮೇಲೆ ಮಳೆಬೆಳೆ ಆಗುವದೆಂದೂ, ಪಾಪ ಹೆಚ್ಚಾದಂತೆ ಅವಘಡಗಳಿಂದ ಮನುಕುಲಕ್ಕೆ ಹಾನಿ ಆಗುತ್ತದೆಂದೂ ನಂಬುತ್ತಾರೆ. ಹಾಗೆಯೆ ವಯಕ್ತಿಕ ಪುಣ್ಯದ ಕಾರ್ಯಗಳಿಂದ ಮನಸ್ಸಿಗೆ ನೆಮ್ಮದಿ ಪ್ರಾಪ್ತವಾಗುತ್ತದೆಂದು ತಿಳಿಯುತ್ತಾರೆ. ಹಾಗೆಯೆ ಇತರರೊಂದಿಗೆ ನಡೆದುಕೊಳ್ಳುತ್ತಾರೆ. ಸತ್ಕಾರ್ಯಗಳಿಂದ ಉಂಟಾಗುವ ಮನಸ್ಸಿನ ಸಮಾಧಾನ ಮನುಕುಲಕ್ಕೆ ಆತ್ಮಗತವಾದಂತಿದೆ. ಸ್ವಸ್ಥ ಸಮಾಜಕ್ಕೆ ಅದು ಅಗತ್ಯ ಕೂಡ ಅಲ್ಲವೇ. ಪಾಪಪುಣ್ಯಗಳ ವಿಚಾರ ಕಾಲ್ಪನಿಕವಾಗಿರಬಹುದಾದರೂ ನೆಮ್ಮದಿಯ ಸ್ವಸ್ಥ ಸಮಾಜಕ್ಕೆ ಅದರ ಅಗತ್ಯ ಕೂಡ ಇದೆ. ‘ಶಿಷ್ಟ ಪರಿಪಾಲಕ, ದುಷ್ಟ ಸಂಹಾರಕ ಗೋವಿಂದಾ||’ ಎಂಬ ನಂಬುಗೆಯೂ ಇದೆ.

ಸೊಳ್ಳೆಗಳ ಹತ್ಯೆ ಕುರಿತು ನನ್ನ ಪಾಪಪ್ರಜ್ಞೆಯನ್ನು ಮರೆಮಾಚಲು ಇಷ್ಟೆಲ್ಲಾ ಹೇಳಬೇಕಾಯಿತೆಂದು ಭಾವಿಸದಿರಿ. ಸೊಳ್ಳೆ ಸಂಹಾರ ಕಾರ್ಯ ಪಾಪಕಾರ್ಯ ಆಗಿರಲಿಕ್ಕಿಲ್ಲ. ಇಲ್ಲದಿದ್ದರೆ ಪಾಪದ ಹೊರೆಯಿಂದ ನಾನು ನೀವು ಕೂಡಿಯೇ ನಲುಗಿ ಹೋಗುತ್ತಿದ್ದೆವು. ಆದರೂ ಸೊಳ್ಳೆ ಹತ್ಯೆ ಪಾಪ ಎಂದಾದರೆ ನಾನು ಅದನ್ನು ಬೇರೆಯದೇ ಆದ ಮಾರ್ಗದ ಮೂಲಕ ನಿವಾರಿಸಿಕೊಳ್ಳಬೇಕೆಂದು ಮಾಡಿದ್ದೇನೆ. ಸರಕಾರಿ ಸೇವೆಯಲ್ಲಿ ನಾಡಿನುದ್ದಕ್ಕೂ ವರ್ಗಾವಣೆ ಹೆಸರಲ್ಲಿ ಅಲ್ಲಲ್ಲಿ ವಾಸವಾಗಿ ನಾಡಿನ ಎಲ್ಲ ಭಾಗಗಳ ಸೊಳ್ಳೆಗಳಿಗೆ ರಕ್ತದಾನ ಮಾಡುತ್ತ, ಅವುಗಳನ್ನು ಅಷ್ಟಿಷ್ಟು ಸಂಹರಿಸುತ್ತ ಬಂದಿರುವ ನನಗೆ ನಾಡಿನ ವಿವಿಧ ಭಾಗಗಳ ಸೊಳ್ಳೆಗಳ ಗುಣಾವಗುಣಗಳ ಸ್ಪಷ್ಟ ಪರಿಚಯವಿದೆ. ಕರಾವಳಿ ಭಾಗದ ಸೊಳ್ಳೆಗಳು, ಕಲ್ಯಾಣ ಕರ್ನಾಟಕ ಭಾಗದ ಸೊಳ್ಳೆಗಳು, ರಾಜಧಾನಿಯ ಸೊಳ್ಳೆಗಳು, ಹೆಚ್ಚು ಭಾಗ ಸೇವೆ ಸಲ್ಲಿಸಿರುವ ಕಿತ್ತೂರು ಕರ್ನಾಟಕ ಭಾಗದ ಸೊಳ್ಳೆಗಳು, ಹೀಗೆ ಪ್ರದೇಶವಾರು ಸೊಳ್ಳೆಗಳ ಗುಣಸ್ವಭಾವ, ಕಚ್ಚುವ, ರಕ್ತ ಹೀರುವ ಅವುಗಳ ಚಾಕಚಕ್ಯತೆ ಎಲ್ಲಾ ಗೊತ್ತು. ಆದ್ದರಿಂದ ಸೊಳ್ಳೆಗಳ ಕುರಿತು ಒಂದು ಮಹಾಪ್ರಬಂಧವನ್ನು ಏಕೆ ರಚಿಸಬಾರದೆಂದು ಚಿಂತಿಸುತ್ತಿದ್ದೇನೆ. ಸೊಳ್ಳೆಗಳ ಕುರಿತು ಮಹಾಕಾವ್ಯವನ್ನೂ ರಚಿಸಿಬಹುದು. ಆದರೆ, ಕಾವ್ಯ ನನ್ನ ಕ್ಷೇತ್ರವಲ್ಲ. ಎಂಥೆಂಥದ್ದೋ ವಿಷಯಗಳ ಕುರಿತು ಈಗ ವಿಶ್ವವಿದ್ಯಾಲಯಗಳಲ್ಲಿ ರಿಸರ್ಚ್ ಅಥವಾ ಪಿ.ಎಚ್.ಡಿ ಅಧ್ಯಯನಗಳು ನಡೆಯುತ್ತಿವೆ. ನಾನು ‘ಸೊಳ್ಳೆಗಳು: ಒಂದು ಅಧ್ಯಯನ’ ಎಂದೋ, ‘ಕರ್ನಾಟಕದ ಸೊಳ್ಳೆಗಳು: ಒಂದು ಅಧ್ಯಯನ’ ಎಂದೋ, ‘ಸೊಳ್ಳೆಗಳೊಂದಿಗೆ ನನ್ನ ರಕ್ತಸಂಬಂಧ’ ಎಂದೋ, ಅಥವಾ ಸರಳವಾಗಿ ‘ಸೊಳ್ಳೆಗಳು: ಒಂದು ಬಹುಮುಖಿ ಅಧ್ಯಯನ’ ಎಂದೋ ಒಂದು ಮಹಾಪ್ರಬಂಧ ರಚನೆಗೆ ತೊಡಗಬೇಕೆಂದಿದ್ದೇನೆ. ಅದಕ್ಕೆ ಅಗತ್ಯವಾದ ವಿಪುಲ ಸಾಮಗ್ರಿ ನನ್ನ ಬಳಿ ಇದೆ. ಸೊಳ್ಳೆಗಳ ವಿರಾಟ್ ಸ್ವರೂಪ, ಅವುಗಳ ಹುಟ್ಟು ಬೆಳವಣಿಗೆ, ಅದಕ್ಕೆ ಪೂರಕ ಪರಿಸರಗಳು, ಮನುಷ್ಯನೊಂದಿಗೆ ಅವುಗಳು ಹೊಂದಿರುವ ಅವಿನಾಭಾವ ರಕ್ತ ಸಂಬಂಧ, ಅವುಗಳ ರಕ್ತ ಹಿರುವ ಚತುರತೆ, ಅವುಗಳ ಮಾಯಾವಿ ಗುಣಸ್ವಭಾವ, ಮನೆಯೊಡೆಯ ಮನೆಯೊಳಗೆ ಇದ್ದಾನೋ ಇಲ್ಲವೋ ಎಂದು ಅರಿತು ಅವು ಮಾಡುವ ಗೃಹಪ್ರವೇಶ, ಅವುಗಳ ಆಗಮನ ನಿರ್ಗಮನ, ಸೊಳ್ಳೆ ನಿವಾರಣೋಪಾಯಗಳು. ಅವುಗಳ ಉತ್ಪಾದನೆ ಮತ್ತು ಬಿಸಿನೆಸ್ ಅವಕಾಶಗಳು, ಸೊಳ್ಳೆಜನ್ಯ ರೋಗರುಜಿನುಗಳು, ಸಾವುನೋವುಗಳು, ವೈದ್ಯಕೀಯ ಲೋಕಕ್ಕೆ ಸೊಳ್ಳೆಗಳ ಕೊಡುಗೆ, ಸೊಳ್ಳೆಗಳ ಹುಟ್ಟು ಬೆಳವಣಿಗೆಗಳಿಗೆ ಸ್ಥಳೀಯ ಸಂಸ್ಥೆಗಳ ಕೊಡುಗೆ ಮತ್ತು ಅವುಗಳ ನಿವಾರಣೆಗಾಗಿ ಅವು ಸೃಷ್ಟಿಸಿಕೊಂಡಿರುವ ವ್ಯವಸ್ಥೆ, ಈ ಎಲ್ಲವುಗಳನ್ನು ಮೀರಿ ಸೊಳ್ಳೆಗಳು ಮಾನವನ ಮೇಲೆ ಸಾಧಿಸಿರುವ ಜಯ ಮತ್ತು ಅವು ತಾವೇತಾವಾಗಿ ಮೆರೆವ ಪರಿ, ಹೀಗೆ ಸೊಳ್ಳೆಗಳ ಕುರಿತು ಮಹಾಪ್ರಬಂಧ ರಚನೆಗೆ ನಾನು ಸಜ್ಜಾಗುತ್ತಿದ್ದೇನೆ. ಆ ಮೂಲಕ ಸೊಳ್ಳೆಗಳ ಹತ್ಯೆಯ ಪಾಪ ಪರಿಹಾರವಾಗಬಹುದು. ಅದು ನನಗೆ ಒಂದು ಡಾಕ್ಟರೇಟ್ ಪದವಿಯನ್ನೂ ತರಬಹುದು ಎಂಬ ದುರಾಸೆ ಅಥವಾ ದೂರದ ಆಸೆಯೂ ಇದೆ. ಯಾವ ವಿಶ್ವವಿದ್ಯಾಲಯದಲ್ಲಿ ನೋಂದಾಯಿಸಿಕೊಳ್ಳಬೇಕು, ಸೂಕ್ತ ಗೈಡ್ ಯಾರಾದರೂ ಸಿಗಬಹುದೇ ಎಂದು ಹುಡುಕುತ್ತಿದ್ದೇನೆ. ನಿಮಗೆ ಗೊತ್ತಿದ್ದರೆ ತಿಳಿಸಿ.

